


ಅದು ಯಾವ ದೊಡ್ಡ ಹ್ಯೂಮಿಲಿಯೇಶನ್ನಂತ ಒದ್ದಾಡ್ತಿದೀಯ? ನೋಡು ಪ್ರಿಯಾ, ನಿಮ್ಮದು ಸರ್ವಿಸ್ ಬೇಸ್ಡ್ ಕಂಪನಿ. ಅವರು ನೂರಾರು ಕಡೆಯಿಂದ ಪ್ರಾಜೆಕ್ಟ್ ತಂದಿರ್ತಾರೆ. ಅವರ ಕ್ಲಯಿಂಟ್‌ಗಳು ಅವರ ತಲೆ ತಿಂತಾರೆ. ಅವರು ನಿಮ್ಮ ತಲೆ ತಿಂತಾರೆ. ದಿಸ್ ಈಸ್ ವೆರಿ ಕಾಮನ್. ನಿಂಗೆ ಇನ್ನೂ ಎಕ್ಸ್‌ಪೀರಿಯನ್ಸ್ ಕಡಿಮೆ, ಇನ್ನು ನಾಕೈದು ವರ್ಷ ಆದರೆ ಪ್ರಾಡಕ್ಟ್ ಬೇಸ್ಡ್ ಕಂಪನಿ ಕೆಲಸ ಸಿಕ್ಕುತ್ತೆ. ಅಲ್ಲೀವರ್ಗು ಇದನ್ನೆಲ್ಲ ಇಗ್ನೋರ್ ಮಾಡಿ ಮುಂದಕ್ಹೋಗ್ಬೇಕು' ಅಂದ ಅನುನಯಿಸುತ್ತಾ. 'ಹಂಗಾದ್ರೆ ನಿಮ್ ಕಂಪನೀಲಿ ಡೆಡ್‌ಲೈನ್‌ಗಳಿರಲ್ವ?' ಅಂದಾಗ 'ಇಲ್ಲ... ಇದ್ದರೂ ತುಂಬ ಕಡಿಮೆ. ಆದರೆ ಅವನು ಯಾಕೆ ಪದೇ ಪದೇ ನಿಂಗೆ ಹೀಗೆ ಹೇಳ್ತಾನೆ?' ಅಂತ ಕೇಳಿದಾಗ 'ಏನಿಲ್ಲ, ಇವತ್ತು ಸಂಜೆ ಆರೂವರೆಯಾಗಿತ್ತು. ನನ್ನ ಕೆಲಸ ನಿಲ್ಲಿಸಿ ಲಾಗೌಟ್ ಆಗಬೇಕಿತ್ತು. 'ಪ್ರಿಯಾ, ವೀಸಾಕಾರ್ಡ್ ಪ್ರಾಜೆಕ್ಟ್ ಕಂಪ್ಲೀಟ್ ಆಯ್ತು?' ಅಂದ. 'ಇಲ್ಲ, ಇನ್ನೂ ಎರಡು ದಿನ ಬೇಕಲ್ಲ' ಅಂದೆ. 'ನೋ ಛಾನ್ಸ್. ಎರಡು ದಿನ ಅಂದರೆ ಕ್ಲಯಿಂಟ್ ಕಾಂಟ್ರಾಕ್ಟ್ ರದ್ದು ಮಾಡ್ತಾನೆ. ಅವರ ಬ್ಯಾಂಕ್ ಲಾಂಚಿಂಗ್ ಇನ್ನು ನಾಕು ದಿನಕ್ಕಿದೆ. ನಾಳೇನೇ ಹ್ಯಾಂಡ್ ಓವರ್ ಮಾಡಬೇಕು. ಯು ಹ್ಯಾವ್ ಟು ಗೆಟ್‌ಇಟ್ ಡನ್ ಬೈ ಟುಮಾರೋ. ಈಗ ಲಾಗೌಟ್ ಆಗ್ಬೇಡ. ಆದಷ್ಟು ಇವತ್ತು ಕೆಲಸ ಮುಗಿಸೋಣ. ನಾನೂ ಇರ್ತೀನಿ. ಇಲ್ಲೇ ಡಿನ್ನರ್ ತರಿಸೋಣ ಐ ವಿಲ್ ಡ್ರಾಪ್ ಯು ಹೋಮ್ ಬ್ಯಾಕ್' ಅಂದ.

ನಾನು, 'ಆಗಲ್ಲ ಸಂದೀಪ್, ಐ ಹ್ಯಾವ್ ಎ ಕಿಡ್ ವೈಟಿಂಗ್ ಅಟ್ ಹೋಮ್. ಬೆಳಿಗ್ಗೆ 8.30ಕ್ಕೆ ಮನೆ ಬಿಟ್ಟಿದ್ದು' ಅಂದೆ. 'ನಿನ್ನ ಟ್ರಾವೆಲಿಂಗ್ ಟೈಮೆಲ್ಲ ನಾವು ಕ್ಯಾಲುಕ್ಯುಲೇಟ್ ಮಾಡಕ್ಕಾಗಲ್ಲ. ಇಲ್ಲೇ ಹತ್ರ ಮನೆ